**ಸಾಕ್ಷಿಯನ್ನು ದಿಃ 01.04.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನನಗೆ ಈಗ 70 ವರ್ಷ ವಯಸ್ಸು ಎಂದರೆ ಸರಿಯಲ್ಲ. ನನ್ನ ವಯಸ್ಸಿಗೆ ಸಂಬಂಧಪಟ್ಟ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೆನೋ ಗೊತ್ತಿಲ್ಲ. ನನ್ನ ಆಧಾರ ಕಾರ್ಡು ಹಾಡಗೂ ಇತರೇ ದಾಖಲೆಗಳನ್ನು ಹಾಜರುಪಡಿಸಿದ್ದರೇ ನನ್ನ ವಯಸ್ಸು ಗೊತ್ತಾಗುತ್ತದೆ ಎಂದು ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲೂ ಸಹ ನನ್ನ ವಯಸ್ಸು 70 ಎಂದು ಕಾಣಿಸಲಾಗಿದೆ ಎಂದರೆ ಅದು ತಪ್ಪಾಗಿದೆ. ಕೆಎ-09-ಡಿ-2704 ವಾಹನಕ್ಕೆ ನಾನು ತರಾತುರಿಯಲ್ಲಿ ಸೌದೆ ತುಂಬಿಸಲು ಹೋದ ಸಮಯದಲ್ಲಿ ನನ್ನ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಎದುರುದಾರರ ವಾಹನವನ್ನು ಹಿಂಬದಿಗೆ ತೆಗೆದುಕೊಳ್ಳುವಾಗ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ಜಮೀನಲ್ಲಿ ಕಳೆ ಕೀಳುವ ಕೆಲಸಕ್ಕೆ ನಾನು ಹೋಗಿದ್ದೆನು. ಸದರಿ ಜಮೀನು ಎದುರುದಾರರಿಗೆ ಸೇರಿರುತ್ತದೆ. ನನ್ನೊಂದಿಗೆ 4 ಜನ ಕೆಲಸ ಮಾಡುತ್ತಿದ್ದರು. ಸದರಿ ಜಮೀನಿನಲ್ಲಿ ಕೆಲಸಕ್ಕೆ ಬಂದವರು ಸೌದೆಗಳನ್ನು ಕಟ್ಟುತ್ತಿದ್ದರು, ನಾನು ಅವರ ಬಳಿಗೆ ಹೋಗುತ್ತಿದ್ದೆನು, ಆ ಸಮಯದಲ್ಲಿ ಅಪಘಾತ ಆಗಿರುತ್ತದೆ. ಎದುರುದಾರರ ವಾಹನವನ್ನು ನಾನು ಹೇಳಿರುವ ರೀತಿಯಲ್ಲಿ ನಿರ್ಲಕ್ಷ್ಯತದಿಂದ ಚಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ ಎಂದರೆ ಸರಿ. ಸದರಿ ದಿನಾಂಕದಂದು ಆದ ರೂ.15 ಸಾವಿರ ವೈದ್ಯಕೀಯ ವೆಚ್ಚನ್ನು ಎದುರುದಾರರು ಭರಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವೀಳ್ಯದೆಲೆ ವ್ಯಾಪಾರ ಮಾಡುತ್ತಿರಲಿಲ್ಲ, ಜಮೀನಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆನು. ತಿಂಗಳಿಗೆ ರೂ 7 ರಿಂದ 8 ಸಾವಿರ ಆದಾಯ ಬರುತ್ತಿತ್ತು. ತಿಂಗಳಿಗೆ ನನಗೆ ರೂ. 30 ಸಾವಿರ ಆದಾಯ ಇತ್ತು ಎಂಬ ಬಗ್ಗೆ ದಾಖಲೆಯನ್ನು

ಹಾಜರುಪಡಿಸಿಲ್ಲ ಎಂದರೆ ಸರಿ. ಸುಮಾರು ಒಂದು ವರ್ಷ 4 ತಿಂಗಳ ಹಿಂದೆ ವೈಧ್ಯರ ಬಳಿಗೆ ಕೊನೆ ಬಾರಿಗೆ ಹೋಗಿದ್ದೆ. ನಾನು ಮೊದಲಿನಂತೆ ಈಗ ಕೆಲಸವನ್ನು ಮುಂದುವರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಿಡಿಸಿರುವ ಬಿಲುಲಗಳಿಗೆ ಪೂರರಕವಾದ ಸಲಹಾ ಚೀಟಿ ಹಾಜರುಪಡಿಸದ ಕಾರಣ ಅವೆಲ್ಲವೂ ಸೃಷ್ಟಿತ ದಾಖಲೆಗಳು ಎಂದರೆ ಸರಿಯಲ್ಲ. ಎದುರುದಾರರ ತಪ್ಪಿನಿಂದ ಅಪಘಾತ ಆಗದ ಕಾರಣ ಪರಿಹಾರ ನೀಡಲು ಅವರು ಹೊಣೆಗಾರರು ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.